ಸಿ.ಸಿ.480/2024

ಪಿಡಬ್ಲ್ಯೂ-3

ದಿನಾಂಕಃ 15.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎಂ.ಪಿ. ವಕೀಲರಿಂದಃ**

ನಾನು ಚಾಸಾ-1 ರವರ ದೊಡ್ಡಪ್ಪನ ಮಗ ಎಂದರೆ ಸರಿ. ಚಾಸಾ-1 ರವರ ತಂದೆಗೆ ತ್ರಿಪುರ ಗ್ರಾಮದಲ್ಲಿ ಜಮೀನು ಇದೆ ಆದರೆ ಅದರ ಸ.ನಂ. ನನಗೆ ತಿಳಿದಿರುವುದಿಲ್ಲ. ಈ ಪ್ರಕರಣದ ಸಂಬಂಧ ನಾನು ಬಣಕಲ್ ಪೋಲಿಸ್ ಠಾಣೆಯಲ್ಲಿ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಚಾಸಾ-1 ರವರ ಪರವಾಗಿ ಸಾಕ್ಷಿ ನುಡಿಯಲು ಚಾಸಾ-1 ರವರೇ ನನ್ನ ಹೆಸರನ್ನು ನೀಡಿರುತ್ತಾರೆ. ನನ್ನ ಹೆಸರಿನಲ್ಲಿ ತ್ರಿಪುರ ಗ್ರಾಮದಲ್ಲಿ ಜಮೀನು ಇದೆ. ಸದರಿ ಜಮೀನಿನ ಸ.ನಂ. ನನಗೆ ತಿಳಿದಿರುವುದಿಲ್ಲ. ಚಾಸಾ-1 ರವರ ಜಮೀನು ನನ್ನ ಜಮೀನಿನ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಸರ್ವೇ ಇಲಾಖೆಯವರು ಸರ್ವೇ ಮಾಡಿದ ಸಮಯದಲ್ಲಿ ಚಾಸಾ-1 ರವರ ತಂದೆಯ ಜಮೀನನ್ನು ನಾನು ಒತ್ತುವರಿ ಮಾಡಿರುತ್ತೇನೆ ಎಂದು ವರದಿಯನ್ನು ನೀಡಿರುತ್ತಾರೆ ಮತ್ತು ಸದರಿ ಜಮೀನು ನನ್ನ ಸ್ವಾಧೀನದಲ್ಲಿ ಇದೆ ಎಂದರೆ ಸರಿ. ನನ್ನ ಜಮೀನಿನಿಂದ ಚಾಸಾ-1 ರವರ ಜಮೀನಿಗೆ ಅಂದಾಜು 20 ರಿಂದ 30 ಅಡಿ ಅಂತರ ಇರಬಹುದು. ಚಾಸಾ-1 ರವರ ತಂದೆಯ ಜಮೀನಿನಿಂದ ಅಂದಾಜು 10 ಅಡಿ ಅಂತರದಲ್ಲಿ ರಸ್ತೆ ಹಾದುಹೋಗಿರುತ್ತದೆ. ನನ್ನ ಜಮೀನಿಗೆ ಹೋಗುವ ರಸ್ತೆಯ ಮೂಲಕವೇ ಚಾಸಾ-1 ರವರ ತಂದೆಯ ಜಮೀನಗೆ ಹೋಗಬೇಕು ಎಂದರೆ ಸರಿ. 2 ನೇ ಆರೋಪಿಯ ವಿರುದ್ಧ ಅಸಲು ದಾವಾ ಸಂಖ್ಯೆ 140/2020 ರಲ್ಲಿ ಒಂದು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಬಾಸಯ್ಯನ ಮಗ ರಮೇಶ ಎಂದರೆ ನಾನೇ ಆಗಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿರುವ ಸಹಿಯು ಸಾಕ್ಷಿಯು ತಮ್ಮದೇ ಎಂದು ಒಪ್ಪಿದ ಕಾರಣ ಸದರಿ ದಾಖಲಾತಿಯನ್ನು ನಿಡಿ-4 ಎಂದು ಗುರುತಿಸಲಾಯಿತು. ಅಸಲು ದಾವೆ 140/2020 ರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿರುವ ಸಹಿಯು ಸಾಕ್ಷಿಯು ತಮ್ಮದೇ ಎಂದು ಒಪ್ಪಿದ ಕಾರಣ ಸದರಿ ದಾಖಲಾತಿಯನ್ನು ನಿಡಿ-5 ಎಂದು ಗುರುತಿಸಲಾಯಿತು. ಪ್ರಸ್ತುತ ಪ್ರಕರಣದಲ್ಲಿ ಹೇಳಲಾಗಿ ಜಗಳವನ್ನು ನಾನು ರಸ್ತೆಯಲ್ಲಿ ನಿಂತು ನೋಡಿರುತ್ತೇನೆ ಎಂದು ಹೇಳಿಕೆಯನ್ನು ನೀಡಿರುತ್ತೇನೆ. ಅದೇ ರೀತಿಯಾಗಿ ನಾನು ಗದ್ದೆಗೆ ಹೋಗುತ್ತಿದ್ದೆ ಎಂದು ತಿಳಿಸಿರುತ್ತೇನೆ. ಅದೇ ರೀತಿಯಾಗಿ ನ್ಯಾಯಾಲಯದ ಮುಂದಿರುವ ಆರೋಪಿಗಳು ಬೈಯ್ಯುತ್ತಿದ್ದರು ಎಂದು ಹೇಳಿರುತ್ತೇನೆ. ನಂತರ ಚಾಸಾ-1 ರವರನ್ನು ನಾವು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ಹೇಳಿರುತ್ತೇವೆ. ಈ ಎಲ್ಲಾ ವಿಷಯವನ್ನು ಈ ಹಿಂದೆ ನಾನು ನ್ಯಾಯಾಲಯದ ಮುಂದೆ ಕೇವಲ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ವಿಷಯವನ್ನು ನ್ಯಾಯಾಲಯದಲ್ಲಿ ಹೊರತುಪಡಿಸಿ ಇನ್ಯಾರ ಮುಂದೆಯೂ ಹೇಳಿರುವುದಿಲ್ಲ. ಪ್ರಸ್ತುತ ಪ್ರಕರಣದ ಘಟನೆಯು ಅಂದಾಜು ಅರ್ಧ ಗಂಟೆಗಳ ಕಾಲ ನಡೆದಿರಬಹುದು. ಆಗ ಸಮಯ ಸ.5.00 ರಿಂದ

6.00 ಗಂಟೆಯಾಗಿರಬಹುದು.

ಆರೋಪಿಗಳು ಚಾಸಾ-1 ರವರನ್ನು ಎಳೆದಾಡಿರುತ್ತಾರೆ ಮತ್ತು ಚಾಸಾ-1 ರವರಿಗೆ ಹೊಟ್ಟೆ ಮತ್ತು ಕೈಗೆ ಪೆಟ್ಟಾಗಿರುವ ವಿಷಯ ಸುಳ್ಳು ಎಂದರೆ ಸರಿಯಲ್ಲ. ಪೋಲಿಸರು ನನ್ನಿಂದ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿರುವುದಿಲ್ಲ, ಅದೇ ರೀತಿಯಾಗಿ ನನಗೆ ಪೋಲಿಸರು ಯಾವುದೇ ವಸ್ತುಗಳನ್ನು ತೋರಿಸಿರುವುದಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಜಮೀನು ನನ್ನ ಸ್ವಾಧೀನದಲ್ಲಿ ಇರುವ ಕಾರಣ ಮತ್ತು ಅದನ್ನು ಸದರಿಯವರು ಹಿಂಪಡೆದುಕೊಳ್ಳುತ್ತಾರೆ ಎಂಬ ಭಯದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂದಾಜು 6.00 ರ ಸಮಯಕ್ಕೆ ನಾವು ಮೂಡಿಗೆರೆ ಆಸ್ಪತ್ರೆಗೆ ಬಂದಿರುತ್ತೇವೆ. ಅಂದಾಜು 7.00 ರಿಂದ 7.30 ರ ಸಮಯಕ್ಕೆ ಚಿಕ್ಕಮಗಳೂರಿನ ಆಸ್ಪತ್ರೆಗೆ ಹೋಗಿರುತ್ತೇನೆ. ಆರೋಪಿಗಳು ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿರುವ ವಿಷಯ ಸುಳ್ಳು ಎಂದರೆ ಸರಿಯಲ್ಲ. ಅಸಲು ದಾವೆ 140/2022 ರಲ್ಲಿ ನನಗೆ ತಕಾರಾರು ಮಾಡಬಾರದು ಎಂದು ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಚಾಸಾ-4 ನನ್ನ ಸಹೋದರ ಆದರೆ ಒಂದೇ ತಂದೆಯ ಮಕ್ಕಳಾಗಿರುವುದಿಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,
ಮೂಡಿಗೆರೆ.

ಸಿ.ಸಿ.480/2024

ಪಿಡಬ್ಲ್ಯೂ-4

ದಿನಾಂಕಃ 15.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎಂ.ಪಿ. ವಕೀಲರಿಂದಃ**

ನಾನು ವಿದ್ಯಾಭ್ಯಾಸ ಪಡೆದುಕೊಂಡಿರುವುದಿಲ್ಲ. ಹಲವು ವರ್ಷಗಳಿಂದ ನನಗೆ ಚಾಸಾ-1 ರವರ ಪರಿಚಯವಿರುತ್ತದೆ. ನಾನು ಚಾಸಾ-1 ರವರ ದೊಡ್ಡಪ್ಪನ ಮಗ ಎಂದರೆ ಸರಿಯಲ್ಲ. ನಾನು ಸದರಿ ವಿಷಯವನ್ನು ಒಪ್ಪಿಕೊಂಡಲ್ಲಿ ತೊಂದರೆಯಾಗುತ್ತದೆ ಎಂಬ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಗಲಾಟೆಯಾದ ವಿಷಯವನ್ನು ಈ ರೀತಿ ಆಗಿದೆ ಎಂದು ಯಾರಿಗೂ ತಿಳಿಸಿರುವುದಿಲ್ಲ. ಪ್ರಸ್ತುತ ಪ್ರಕರಣದ ಘಟನೆಯು ಗುರುವಾರದಂದು ನಡೆದಿರಬಹುದು. ತ್ರಿಪುರ ಗ್ರಾಮದ ಸ.ನಂ.62 ರಲ್ಲಿ ನನಗೆ ಜಮೀನು ಇರುತ್ತದೆ. ಪ್ರಸ್ತುತವಾಗಿ ಸದರಿ ಜಮೀನು ನನ್ನ ಖಾತೆಯಲ್ಲಿ ಇರುತ್ತದೆ. ಸ.ನಂ.6/2 ಮತ್ತು 6/3 ರ ಜಮೀನು ಯಾರಿಗೆ ಸೇರಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಯಾವ ಜಮೀನಿನೊಳಗೆ ಗಲಾಟೆಯಾಗಿರುತ್ತದೆ ಎಂದು ಹೇಳಲು ಸಾದ್ಯವಿಲ್ಲ. ರಸ್ತೆಯಲ್ಲಿ ನಿಂತು ನಾನು ಗಲಾಟೆಯನ್ನು ನೋಡಿರುತ್ತೇನೆ ಎಯಿ ತಿಳಿಸಿರುತ್ತೇನೆ. ಗದ್ದೆಯಿಂದ ಜಗಳವಾದ ಸ್ಥಳಕ್ಕೆ ಅಂದಾಜು ಅರ್ಧ ಕೀ.ಮೀ. ಅಂತರವಿರುತ್ತದೆ. ಗಲಾಟೆಯಾದ ಸ್ಥಳದಲ್ಲಿ ಸ.ನಂ.62 ಕ್ಕೆ ಹೋಗಲು ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ರಸ್ತೆಯಲ್ಲಿ ನಿಂತು ಜಗಳವನ್ನು ನೋಡಿದ ಬಗ್ಗೆ ಈ ಹಿಂದೆ ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆ.

ಆ ರೀತಿಯಾಗಿ ನಾನು ಹೇಳದಿದ್ದರೂ ಈ ದಿನ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಆರೋಪಿಗಳು ಬೈಯ್ಯುತ್ತಿದ್ದ ಬಗ್ಗೆ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ತಿಳಿಸಿರುತ್ತೇನೆ ಎಂದರೆ ಸರಿ. ಅದೇ ರೀತಿಯಾಗಿ 2 ಮತ್ತು 3 ನೇ ಆರೋಪಿಯು ಚಾಸಾ-1 ರವರನ್ನು ಕೈ ಹಿಡಿದು ಎಳೆದಾಡುತ್ತಿರುತ್ತಾರೆ ಎಂದು ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ತಿಳಿಸಿರುತ್ತೇನೆ. ಅದೇ ರೀತಿಯಾಗಿ ಜಗಳವನ್ನು ನೋಡಿ ಚಾಸಾ-2 ರವರು ಮನೆಯಿಂದ ಹೊರಗೆ ಬಂದರು ಎಂದು ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ತಿಳಿಸಿರುತ್ತೇನೆ. ಜಗಳ ಪ್ರಾರಂಭವಾದ 1 ನಿಮಿಷದ ಒಳಗೆ ಚಾಸಾ-2 ರವರು ಮನೆಯಿಂದ ಹೊರಗೆ ಬಂದಿರುತ್ತಾರೆ. ಪ್ರಸ್ತುತ ಪ್ರಕರಣದ ಘಟನೆಯು ಅಂದಾಜು ಕಾಲು ಗಂಟೆ ನಡೆದಿರಬಹುದು. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದಿರೂ ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಸಿ.ಸಿ.480/2024

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,
ಮೂಡಿಗೆರೆ.